

## ಬತ್ತಿ ಹೋದ ಬಚ್ಚಲು ಮನೆ

ಬದಲಾವಣೆ ಜಗದ ನಿಯಮ ಎಂಬಂತೆ ವರ್ತಮಾನದಲ್ಲಿ ಬದಲಾವಣೆ ಅವಶ್ಯಕ ಮತ್ತು ಅನಿವಾರ್ಯ ಕೂಡ. ಮನೆಯ ಮುಂದಿನ ತೆಂಗಿನ ಮರದ ಸುತ್ತಲೂ ತೆಂಗಿನ ಗರಿಯಿಂದ ಮರೆ ಮಾಡಿದ ಒಂದು ರೀತಿಯ ಮುಕ್ತ ಬಚ್ಚಲು ಮನೆಗಳನ್ನೆಲ್ಲ ನಾವು ನಮ್ಮ ಬಾಲ್ಯದ ದಿನಗಳಲ್ಲಿ ನೋಡಿದ್ದೇವೆ. ಅದರಿಂದ ಸುಧಾರಣೆ ಹೊಂದಿದ, ಈಗ ಇಲ್ಲವಾದ ಬಚ್ಚಲು ಮನೆ ಹಲವರ ನೆನಪಿನ ಅಂಗಳದಲ್ಲಿ ಸುಳಿದಾಡಬಹುದು!

ಹಂಚಿನ ಮನೆಯ ಹಿಂಬದಿಯ ಕಿಬಳಿಗೆ ಹೊಂದಿಕೊಂಡಿರುವ ಈ ಬಚ್ಚಲು ಮನೆ ಒಂದು ಸಮಯದಲ್ಲಿ ಕುಟುಂಬದ ಪ್ರತಿಷ್ಠೆಯ ಬಚ್ಚಲು ಮನೆಯಾಗಿಯೂ ಮೆರೆದಿತ್ತು. ಸ್ನಾನ ಮಾಡಲು ಸುತ್ತಲೂ ಸಿಮೆಂಟಿನ ಕಟ್ಟೆ, ತಳದಲ್ಲಿ ಕುಚ್ಚಿಡಿಯಿಂದ ಬರೆ ಎಳೆದ ನೆಲ, ಅದಕ್ಕೆ ಹೊಂದಿಕೊಂಡ ನೀರು ಕಾಯಿಸುವ ತಾಮ್ರದ ಹಂಡೆ, ಹಂಡೆಗೆ ಬಾವಿಯಿಂದ ನೀರು ತಂದು ಹಾಕುವ ಸನ್ನಿವೇಶವಂತೂ ನಿತ್ಯಜೀವನದ ಸೊಗಸಾಗಿತ್ತು. ಏಪ್ರಿಲ್–ಮೇ ತಿಂಗಳಲ್ಲಿ ದೂರದ ಬಾವಿಗೆ ಹೋಗುವ ಪ್ರಸಂಗವೂ ಎದುರಾಗುತ್ತಿತ್ತು.

ಮನೆಯ ಎಲ್ಲರೂ ಕಾಮನ್ ಆಗಿ ಸ್ನಾನ ಮಾಡಲು ಹಮಾಮ್ ಸಾಬೂನು ಬಳಸುತ್ತಿದ್ದರು. ಬಟ್ಟೆ ಒಗೆಯಲು 501 ಬಾರ್ ಸೋಪ್. ಬಿಳಿ ಬಟ್ಟೆ ಒಗೆಯಲು ಕಸ್ತೂರಿ ಸಾಬೂನು! ಹಂಡೆಯ ನೀರನ್ನು ಮಿತವಾಗಿ ಬಳಸುವಂತೆ ಯಜಮಾನಿಯ ಎಚ್ಚರಿಕೆ ಬೇರೆ. ಹಲ್ಲುಜ್ಜಲು ಮಂಕಿ ಪೌಡರ್! ಇಲ್ಲದೇ ಇದ್ದರೆ ಮಸಿ ಕೆಂಡ (ಇದ್ದಿಲು) ಅಥವಾ ಗೋವಿನ ಸಗಣಿಯ ಬೆರಣಿಯಿಂದ ಮಾಡಿದ ವಿಶೇಷ ಪೌಡರ್! ಚಿಕ್ಕ ಮಕ್ಕಳು ಇರುವ ಮನೆಯಲ್ಲಿ ಎಲ್ಲರೂ ಸ್ನಾನ ಮಾಡಿದ ನಂತರ ಒಲೆಯ ಮುಂದೆಲ್ಲ ಗುಡಿಸಿ ಒಲೆಗೆ ಸೇರಿಸಿ ಹಿಡಿಕೆ ಇರುವ 'ಒಲೆ ಮುಚ್ಚು'ವಿನಿಂದ ಬಂದ್ ಮಾಡುತ್ತಿದ್ದರು. ಆಧುನಿಕ ಬಚ್ಚಲು ಮನೆ ಅನುಭವಿಸುವ ಇಂದಿನ ತಲೆಮಾರಿನವರಿಗೆ ಅಂದಿನ ಬಚ್ಚಲು ಮನೆಯನ್ನು ಊಹಿಸಿಕೊಳ್ಳುವುದು ಕೂಡ ಕಷ್ಟ!

–ಬೀರಣ್ಣ ನಾಯಕ ಮೊಗಟಾ, ಯಲ್ಲಾಪುರ





## ಆರೋಗ್ಯಕರ ಸುಂಡೆ ಕಾಯಿ

ಈ ಹಣ್ಣಿನ ಹೆಸರು 'ಸುಂಡೆ' ಕಾಯಿ. ಹಳ್ಳಿಗರು ಇದನ್ನು 'ಕರುಂಡೆ' ಕಾಯಿ ಎಂದು ಕರೆಯುತ್ತಾರೆ. ಇದು ಮೊದಲಿಗೆ ಹೂವು ಬಿಟ್ಟು, ಕೆಂಪು ಕಾಯಿಯಾಗಿ ನಂತರದಲ್ಲಿ ಕಪ್ಪು ಹಣ್ಣಾಗಿ ಬದಲಾವಣೆಯಾಗುತ್ತದೆ. ಈ ಹಣ್ಣನ್ನು ಒಣಗಿಸಿ ಅದನ್ನು ಸಾಂಬಾರು ಪದಾರ್ಥಗಳಿಗೂ ಬಳಸಲಾಗುತ್ತದೆ. ಇದರಿಂದ ರುಚಿಕರ ಉಪ್ಪಿನಕಾಯಿ ಮಾಡಬಹುದು. ಹುಳಿಯ ಅಂಶ ಹೊಂದಿದ ಈ ಕಾಯಿ ಔಷಧೀಯ ಗುಣಗಳನ್ನು ಪಡೆದುಕೊಂಡಿದೆ. ಇದು ನಮ್ಮ ದೇಹದಲ್ಲಿನ ರಕ್ತದೊತ್ತಡವನ್ನು ಕಡಿಮೆ ಮಾಡುವಲ್ಲಿ ಸಹಕಾರಿಯಾಗುತ್ತದೆ. ಅದಲ್ಲದೆ ಕ್ಯಾನ್ಸರ್ ರೋಗಿಗಳು ಇದನ್ನು ತಿನ್ನುವುದರಿಂದ ಈ ರೋಗವು ವಾಸಿಯಾಗುತ್ತದೆ. ಕರುಳಿನ ಸಮಸ್ಯೆ, ಬಿ.ಪಿ., ಮಧುಮೇಹ ಮುಂತಾದ ಕಾಯಿಲೆಗಳನ್ನು ಗುಣಪಡಿಸುವ ಗುಣವನ್ನು ಹೊಂದಿದೆ.

–ಪ್ರತೀಕ್ಷಾ ರಾವ್, ಶಿರ್ಲಾಲು

